ಈ ಬಗೆಯ ಚಿಂತನೆಯ ಆಳ–ವಿಸ್ತಾರಗಳ ವ್ಯವಸ್ಥೆಯ ವಿಮರ್ಶೆ ಏನೇ ಇರಲಿ, ಸದ್ಯದ ಕಣ್ಣ ಎದುರಿನ ಕತ್ತಲೆಯನ್ನು ದಾಟಲು ನಾವು ನಮ್ಮದೇ ಆದ ಬೆಳಕಿನ ಇಂಧನ ಮೂಲವನ್ನು ಹುಡುಕಿಕೊಳ್ಳಬೇಕು ಎನ್ನುವ ಒಂದು ಪ್ರಬಲ ಸಂಕಲ್ಪವೂ ಕತ್ತಲೆಯಲ್ಲಿ ಮುಳುಗಿ ಹೋಗಿದ್ದ ಲೋಕಗಳನ್ನು ಹುಡುಕಿ ಕೊಂಡು ಹೋಗುವ ಈ ಬಗೆಯ ಪ್ರಬಲ ಚಿಂತನೆಗಳಲ್ಲಿ ಮೂಡಿತು. ಸರಸ್ವತಿಯವರು ಅನುವಾದಿಸಿದ ಗೋದಾವರೀ ಪರುಳೇಕರ ಅವರ 'ಮಾನವ ಎಚ್ಚತ್ತಾಗ' ಹಾಗೂ ಛಾಯಾ ದಾತಾರ ಅವರ 'ಸ್ತ್ರೀ– ಪುರುಷ' ಈ ಎರಡೂ ಕೃತಿಗಳೂ ಈ ಬಗೆಯ ದೃಷ್ಟಿಕೋನದ ಕೃತಿಗಳಾಗಿವೆ. ಅಂದರೆ, ಇತಿಹಾಸದಲ್ಲಿ ಬಾಳಿ ಬದುಕಿದ ಜೀವಿಗಳ ಅರಿವಿನಲ್ಲಿ, ಇಷ್ಟೇ ಏಕೆ, ಶಬ್ದಾರ್ಥ ಸಹಿತವಾದ ಸಾಹಿತ್ಯದಲ್ಲಿ ಕೂಡ, ದಾಖಲೆಯೇ ಆಗದಿರುವ ಅನೇಕ ಜನಾಂಗಗಳ ಸಂಕಟಗಳ ಅಭಿವ್ಯಕ್ತಿಗೆ ಕಟಿಬದ್ಧವಾಗಿ, ಪಂಢರಪುರದ ವಿಠಲನಂತೆ ನಿಲ್ಲುವ ಪಣತೊಟ್ಟ ಕೃತಿಗಳು ಇವು. ಸರಸ್ವತಿ ಅವರು ಈ ಕೃತಿಗಳನ್ನು ಆಯ್ಕೆ ಮಾಡಿ ಕೊಳ್ಳುವ ಕ್ರಿಯೆಯಲ್ಲಿಯೇ ಅವರ ಒಳಗೂ ಇದ್ದ ಕತ್ತಲ ಖಂಡಗಳ ಜೀವಿಗಳ ಹಿಂಸೆಯ ಲೋಕಗಳ ಬಗೆಗಿನ ಮಾನವಿಕ ಮಿಡಿತಗಳು ಬಹಳ ಆರ್ತವಾಗಿ ನಮಗೆ ಸಂವೇದ್ಯವಾಗುತ್ತವೆ.

ತನ್ನ ಎದುರಿನ ಕತ್ತಲಲೋಕಗಳಿಗೆ ಸ್ಪಂದಿಸುವ ಪ್ರಜ್ಞೆ, ಈಗಾಗಲೇ ಈ ಬಗೆಯ ಜನಾಂಗಗಳ ಬಗೆಗೆ ನಮ್ಮ ರಾಷ್ಟ್ರೀಯ ಪ್ರಮಾಣ ಗ್ರಂಥಗಳಲ್ಲಿ ಯಾವ ಬಗೆಯ ನೋಟವಿದೆ ಎನ್ನುವ ಪ್ರಶ್ನೆಯನ್ನೂ ಎದುರಿಸಲೇ ಬೇಕಾಗುತ್ತದೆ. 'ಇಂದು' ಎನ್ನುವದು ನಮಗೆ ದಕ್ಕಿದ್ದೇ 'ನಿನ್ನೆಯಿಂದ' ಎನ್ನುವ ಸತ್ಯವನ್ನಂತೂ ಯಾವ ಪ್ರತಿಭೆಯೂ ಅಲಕ್ಷಿಸುವಂತೆಯೇ ಇಲ್ಲ. ಹೀಗಾಗಿ, ನಮ್ಮ ದೇಶದ ಪ್ರಮಾಣ ಗ್ರಂಥಗಳ ಬಗೆಗೆ, ಅವುಗಳ ಅರ್ಥ ಇದು ಎಂದು ವಿವರಿಸಿದವರ ಅರ್ಥಗಳ ಬಗೆಗೆ ಒಂದು ಬಗೆಯ ಅನುಮಾನಪೂರಿತ ಓದುಗಳು ಶುರುವಾದವು. ಈ ಓದಿನ ಪ್ರಕ್ರಿಯೆ ಎಲ್ಲಿಯವರೆಗೆ ಚಲಿಸಿ, ಒಂದು 'ಅನವಸ್ಥಾ' ಹಂತಕ್ಕೆ ತಲುಪಿತು ಎಂದರೆ, ಈಗಾಗಲೇ ಯಾವುದನ್ನು ನಾವು ಪ್ರಮಾಣ ಎಂದು ಸ್ವೀಕರಿಸಿದ್ದೇವೆಯೋ ಅವುಗಳನ್ನು ಪ್ರಮಾಣಗಳೆಂದು ಏಕೆ ತಿಳಿಯಬೇಕು, ಒಂದು ಜನಾಂಗಕ್ಕೆ ಒಂದು ಪ್ರಮಾಣ ಗ್ರಂಥ ಅನ್ನುವ ವ್ಯವಸ್ಥೆಯ ಅವಶ್ಯಕತೆಯಾದರೂ ಏನಿದೆ, ಈ ಪಠ್ಯಗಳನ್ನು ಹಿಂದಿನವರು ಓದಿದಂತೆಯೇ ನಾವೂ ಓದಬೇಕು ಎನ್ನುವ ಬಂಧನವೇಕೆ–ಇತ್ಯಾದಿಯಾದ ಅನೇಕ ಪ್ರಶ್ನೆಗಳು ಈ ಬಗೆಯ ಕತ್ತಲ ಧ್ಯಾನಗಳಿಗೆ ಕಾಡತೊಡಗಿದವು.

ಆದರೆ, ನಮ್ಮ ದೇಶದ ಪ್ರಮಾಣ ಗ್ರಂಥಗಳ ಅಂತರಂಗದ ವಿನ್ಯಾಸದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಇನ್ನೂ ಜಟಿಲವಾದದ್ದು. ವೇದೋಪನಿಷತ್ತುಗಳು, ಬ್ರಹ್ಮಸೂತ್ರಗಳು, ಹದಿನೆಂಟು ಪುರಾಣಗಳು, ಉಪ ಪುರಾಣಗಳು, ರಾಮಾಯಣ, ಮಹಾಭಾರತ ಹೀಗೆ ಯಾವುದನ್ನೂ ಇಡಿಯಾಗಿ ಓದಿ, ತಿಳಿದು ಒಂದು ಏಕರಸದ ರಸಾಯನವನ್ನು ಸಿದ್ಧಪಡಿಸಿಕೊಳ್ಳಲು ಸದಾ ಜಟಿಲವಾದ ಈ ಗ್ರಂಥ ಸಮೂಹವು ಆಧುನಿಕ ಮರುಓದು ಹಾಗು ಮರುವ್ಯಾಖ್ಯಾನಗಳಿಗೆ, ಕೆಲವು ಸಲ ಬಂಧನಕಾರಕವಾಗಿ, ಮತ್ತೆ ಕೆಲವು ಸಲ ಮುಕ್ತ ವಿಶ್ಲೇಷಣೆಯ ಕ್ರಿಯೆಯಲ್ಲಿ ತೀರಾ ಸಸಾರವಾಗಿಯೂ ಕಂಡವು. ಆಧುನಿಕ ಓದುಗಳು ಅದಕ್ಕಾಗಿ ಮಾಡಿಕೊಂಡ ಹಲವು ಓದು–ವ್ಯಾಕರಣ ರೂಪಗಳು ಕೂಡ ಅಲ್ಲಿ ಕೆಲಸ ಮಾಡಿದವು.

ಕರ್ವೆಯವರ 'ಯುಗಾಂತ', ಭಿಡೆಯವರ 'ವಾಲ್ಮೀಕಿ ರಾಮಾಯಣ: ವರ ಹಾಗೂ ಶಾಪ' ಇವು ಎರಡೂ ಕೃತಿಗಳನ್ನು ಸರಸ್ವತಿ ಅವರು ಕನ್ನಡಕ್ಕೆ ತಂದರು. ಭಿಡೆಯವರ ಕೃತಿಯ ಅನುವಾದಕ್ಕೆ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವೂ ಬಂದಿತು. ಈ ಎರಡೂ ಕೃತಿಗಳು ಮೂಲದಲ್ಲಿ ತಾವು ಕೈಗೆತ್ತಿಕೊಂಡ ಪಠ್ಯಗಳನ್ನು ಬಿಚ್ಚಿ ಮತ್ತೆ ಕಟ್ಟಿಕೊಳ್ಳುವ ಬದಲು ಮುರಿದು ಮತ್ತೆ ಕಟ್ಟಿಕೊಳ್ಳಲು ಹೊರಟ ಓದಿನ ಪ್ರಯತ್ನಗಳು. ಪಾಪ–ಪುಣ್ಯಗಳ ಬದಲು ನ್ಯಾಯ–ಅನ್ಯಾಯಗಳು, ನೀತಿ–